ಅರಮನೆಯಂತಹ ಮನೆ, ಉದ್ಯಾನ, ಈಜುಕೊಳ, ನಿಲುಗನ್ನಡಿ ಮುಂತಾದ ವೈಭವೋಪೇತ ಸೌಲಭ್ಯಗಳು ಈ ಕ್ಷಣವೇ ಬೇಕು' ಎಂದನು. ಯಥಾರೀತಿ 'ತಥಾಸ್ತು' ಎಂಬ ಅಶರೀರವಾಣಿ ಕೇಳಿಸಿತು. ಗುಂಡ ಕಣ್ಬಿಟ್ಟು ನೋಡುತ್ತಾನೆ. ಥಳ ಥಳ ಹೊಳೆಯುವ ಮನೆ, ಉದ್ಯಾನ, ಈಜುಕೊಳ ಸಿದ್ಧವಾಗಿತ್ತು. ಮನೆಯ ತುಂಬಾ ದುಬಾರಿ ಬೆಲೆಯ ವಸ್ತುಗಳು ರಾರಾಜಿಸುತ್ತಿದ್ದವು.

ಇವನ್ನೆಲ್ಲಾ ನೋಡಿ ಖುಷಿಗೊಂಡ ಗುಂಡನಿಗೆ ಕುಣಿಯಬೇಕೆಂದು ಮನಸ್ಸಾಯಿತು. ಏಳಲು ನೋಡಿದ ಆದರೆ ತನ್ನ ದೇಹ ಏಳಲಿಲ್ಲ. ಹೊಟ್ಟೆ ಡೊಳ್ಳಿನಂತಾಗಿ ಮುಂದೆ ಬಂದು ಅಂಗಿಯ ಗುಂಡಿಗಳು ಸಿಡಿದವು. ಕಂಬದಂತೆ ತೋಳುಗಳು ತೂಗಿದರೆ ಮರದ ಕಾಂಡದಂತೆ ತೊಡೆಗಳು ದಪ್ಪವಾಗಿ ಪಂಚೆಯೂ ಪರ್‍ರ್ ಎಂದು ಹರಿದ ಸದ್ದಾಯಿತು. ಒಡನೆಯೇ ಗುಂಡನಿಗೆ ಅರ್ಥವಾಯಿತು ತನ್ನ ದೇಹ ದಪ್ಪವಾಗಿದೆ ಎಂದು. ಸರಿ ಮತ್ತೆ ಮಂತ್ರ ಪಠಿಸಿ ಹರಿದುಹೋದ ಬಟ್ಟೆಗಳ ಬದಲಿಗೆ ದೊಡ್ಡ ಅಳತೆಯ ಬಟ್ಟೆಗಳನ್ನು ಬೇಡಿಕೊಂಡ. ಆಗ ಬಟ್ಟೆಗಳೇನೋ ಹೊಸದಾಗಿ ಸಿಕ್ಕವು ಆದರೆ ಅವೂ ಕೂಡ ಬಿಗಿಯಾದವು. ಏಕೆಂದರೆ ದೇಹ ಮತ್ತಷ್ಟು ಹಿಗ್ಗಿಕೊಂಡಿತ್ತು. ಇದೇ ಸಮಯದಲ್ಲಿ ಗುಂಡನ ಅಕ್ಕಪಕ್ಕದ ಮನೆಯವರು ಹೊಸದಾಗಿ ರೂಪುಗೊಂಡ ಅರಮನೆಯನ್ನು ನೋಡಲು 'ಗುಂಡಾ ಗುಂಡಾ' ಎಂದು ಕೂಗುತ್ತಾ ಒಳಬಂದರು. ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸಲು ಗುಂಡಾ ಏದುಸಿರು ಬಿಡುತ್ತಾ ಮೇಲೆದ್ದು ನಿಧಾನವಾಗಿ ಜನರ ಬಳಿ ಸಾಗಿ 'ಬನ್ನಿ ಬನ್ನಿ ಒಳಬನ್ನಿ' ಎಂದು ಕರೆದನು.

ಆದರೆ ನೆರೆದಿದ್ದ ಜನರಿಗೆಲ್ಲಾ ಇವನಾರೆಂದು ಗೊತ್ತಾಗಲೇ ಇಲ್ಲ 'ಏನಪ್ಪಾ ಯಾರು ನೀನು? ನಮ್ಮ ಗುಂಡಣ್ಣನ ಮನೆಯಲ್ಲೇನು ಕೆಲಸ ನಿನಗೆ?' ಎಂದು ಕೇಳಿದರು. ಗುಂಡಾ ತಾನೇ ಗುಂಡಣ್ಣ ಎಂದು ಪರಿಪರಿಯಾಗಿ ಹೇಳಿದರೂ ಜನರಾರು ಅವನ ಮಾತನ್ನು ನಂಬುವಂತಿರಲಿಲ್ಲ. ಏಕೆಂದರೆ ಅವನ ರೂಪ ಅಷ್ಟೊಂದು ಬದಲಾಗಿತ್ತು. ಸಾಕಷ್ಟು ವಾದ–ವಿವಾದದ ಕೊನೆಗೆ ಜನರೆಲ್ಲಾ ಒಟ್ಟಾಗಿ 'ನಮ್ಮ ಗುಂಡಣ್ಣನನ್ನು ಎಲ್ಲಿಟ್ಟಿರುವೆ? ಅವನನ್ನು ಕೊಂದು ಇಡೀ ಮನೆಯಲ್ಲಿ ನೀನೊಬ್ಬನೇ ಇರಬೇಕೆಂದು ಬಗೆದಿರುವೆಯಾ?' ಎಂದು ಅಬ್ಬರಿಸುತ್ತಾ ಒಗ್ಗಟ್ಟಾಗಿ ಅವನನ್ನು ಸುತ್ತುವರಿದು ಅನಾಮತ್ತಾಗಿ ಎತ್ತಿಕೊಂಡು ಹೋಗಿ ಮನೆಯ ಹಿಂದಿನ ಬಾವಿಗೆ ಎಸೆದರು. ಗುಂಡಾ ಹೋ ಹೋ ಎಂದರಚುತ್ತಾ ಬಾವಿಗೆ ಬಿದ್ದನು. ಅವನ ಮುಖಕ್ಕೆ ನೀರು ಚಿಮುಕಿಸಿದಂತಾಗಿ ಎಚ್ಚರವಾಯಿತು. ಕಣ್ಬಿಟ್ಟು ನೋಡಿದರೆ ಅವನು ಮಂಚದ ಮೇಲಿಂದ ಕೆಳಗೆ ಉರುಳಿಬಿದ್ದಿದ್ದನು. ಮುಖವೆಲ್ಲಾ ಬೆವೆತು ನೀರಾಗಿತ್ತು. 'ಹೋ ಇದು ಕನಸೇ! ಅಬ್ಬಾ ಎಂತಹ ವಿಲಕ್ಷಣ ಕನಸು? ನಾವು ಹೇಗಿದ್ದೇವೋ ಹಾಗೇ ನಮ್ಮನ್ನು ನಾವು ಒಪ್ಪಿಕೊಳ್ಳಬೇಕೆ ವಿನಃ ಇನ್ನೊಬ್ಬರಂತಾಗಲು ಪ್ರಯತ್ನಿಸಬಾರದು' ಎಂದು ತನಗೆ ತಾನೇ ಹೇಳಿಕೊಳ್ಳುತ್ತಾ ಗುಂಡಾ ನಿದ್ರೆಗೆ ಜಾರಿದನು. ■



# ಏನನ್ನು...

■ **ತಮ್ಮಣ್ಣ ಬೀಗಾರ**

ಕಲೆ: ವಿಜಯಕುಮಾರಿ ಆರ್

ಪುಟ್ಟಿ ಬಂದಳು ಪುಟ್ಟಿ ಬಂದಳು
ಬರ್‍ತಾ ಬರ್‍ತಾ ಏನೋ ಅಂದಳು
ಕೆನ್ನೆ ಗಿನ್ನೆ ಉಬ್ಬಿಸಿಕೊಂಡು
ಹುಬ್ಬನು ಕೂಡಿಸಿ ಎಬ್ಬಿಸಿಕೊಂಡು

ಹೊಟ್ಟೆ ಮುಂದೆ ಕಾಲು ಹಿಂದೆ
ಕೈಯನು ಹೇಗೋ ಸೊಟ್ಟು ಮಾಡಿ
ಹೌದು ಹೌದು ಸಿಟ್ಟು ನೋಡಿ

ಪಿಳಿ ಪಿಳಿ ಕಣ್ಣು ಸಣ್ಣ ಸಣ್ಣ

ಮುಖದ ಮೇಲೆ ಏರಿದೆ ಬಣ್ಣ
ನೋಡಿ ನೋಡಿ ಹೇಗಿದ್ದಾಳೆ
ಮಾತೇ ಆಡದೆ ನೋಡ್ತಿದ್ದಾಳೆ
ಹೊಟ್ಟೆಯ ಒತ್ತಿ ತಲೆಮೇಲೆತ್ತಿ

ಒತ್ತಿ ಒತ್ತಿ ತುಟಿಗಳ ಒತ್ತಿ
ಕೈಯನೆ ಬಾಯಿ ಮಾಡಿಕೊಂಡು
ಹೇಳಿಯೆ ಬಿಟ್ಟಳು ಏನನ್ನು...
ಅಮ್ಮನು ಕೊಟ್ಟಿಲ್ಲ ತಿನಿಸನ್ನು ■

## ಕುಂಚ ಪ್ರಪಂಚ



**ಸಿರಿ ಸಿ.ಎನ್.**

8ನೇ ತರಗತಿ, ಸಂತ ಚಾರ್ಲ್ಸ್ ಇಂಗ್ಲಿಷ್ ಶಾಲೆ, ಭದ್ರಾವತಿ

